**MVC 60-25 PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಎದುರುದಾರ ಪರ ಶ್ರೀ B N S, ವಕೀಲರಿಂದಃ**

2. ದಿಃ 18.6.2024 ರಂದು ಬಸ್ಸಿನ ಮೇಲೆ ಪ್ರಯಾಣ ಮಾಡುವ ಬಗ್ಗೆ ಟಿಕೇಟ ಹಾಜರಪಡಿಸಿಲ್ಲ, ಆನ್ ಲೈನ್ ದಲ್ಲಿ ಬುಕ್ ಮಾಡಿದ್ದೆವು. ಆನ್ ಲೈನ್ ದಲ್ಲಿ ಬುಕ್ ಮಾಡಿದ ಮೊಬೈಲದಲ್ಲಿದೆ ಹಾಜರಪಡಿಸಿಲ್ಲ. ಅಪಘಾತ ವಾದಾಗ ನಾನು ಮಲಗಿಕೊಂಡಿದ್ದೆನು. ಆ ದಿನ ಬಸ್ ನಿಧಾನವಾಗಿ ಹೊರಟಿತ್ತು ಅಂದರೆ ಗೊತ್ತಿಲ್ಲ. ಬಸ್ ಹಾಗೂ ಲಾರಿ ನಡುವೆ ಅಪಘಾತವಾಗಿದೆ ಅಂತಾ ಗೊತ್ತಾಯಿತು. ಲಾರಿ ಯಾವುದೇ ಸಿಗ್ನಲ್ ಕೊಡದೇ ರೋಡಿನ ಮಧ್ಯೆದಲ್ಲಿ ನಿಲ್ಲಿಸಿದ್ದರಿಂದ ಅಪಘಾತ ವಾಗಿದೆ ಅಂದರೆ ಗೊತ್ತಿಲ್ಲ. ಲಾರಿ ಚಾಲಕನ ತಪ್ಪಿನಿಂದ ಅಪಘಾತ ವಾಗಿದೆ. ಬಸ್ ಚಾಲಕನ ತಪ್ಪಿನಿಂದ ಅಪಘಾತ ವಾಗಿಲ್ಲ ಅಂದರೆ ಸರಿಯಲ್ಲ. ಲಾರಿ ಚಾಲಕ – ಮಾಲಿಕ ಹಾಗೂ ವಿಮೆ ಕಂಪನಿ ಮೇಲೆ ಕೇಸ್ ಮಾಡಿದ್ದೇವೆ ಅಂದರೆ ಸರಿ. ಟ್ಯೂಶನ್ ಮಾಡುವ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ನಾನು ಆದಾಯ ತೆರಿಗೆ ಕಟ್ಟುವುದಿಲ್ಲ. ನಾನು 25 ಸಾವಿರ ರೂ. ಟ್ಯೂಶನ್ ಹೇಳಿ ಗಳಿಸುತ್ತಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಬಿ ಎಸ್‌ಸಿ ವರೆಗೆ ವ್ಯಾಸಂಗ ಮಾಡಿದ್ದೇನೆ. ಅಪಘಾತ ವಾದ ನಂತರ ಸರಕಾರಿ ಆಸ್ಪತ್ರೆ, ಯಲ್ಲಾಪೂರ ಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ಬಂದಿದ್ದೇನೆ. ಯಲ್ಲಾಪೂರದಲ್ಲಿ ಚಿಕಿತ್ಸೆ ಪಡೆದ ನಂತರ ಆರೋಗ್ಯವಾಗಿದ್ದೇನೆ ಅಂದರೆ ಸರಿಯಲ್ಲ. ನನಗೆ ವಿವೇಕಾನಂದ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡುವ ಅವಶ್ಯಕತೆ ಇರಲಿಲ್ಲ ಅಂದರೆ ಸರಿಯಲ್ಲ. 4 ಲಕ್ಷ ರೂ. ಖರ್ಚು ಮಾಡಿದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. 4 ಲಕ್ಷ ರೂ. ಖರ್ಚು ಮಾಡಿದ್ದೇನೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈಗ ನಾನು ಹುಬ್ಬಳ್ಳಿಯಲ್ಲಿದ್ದೇನೆ. ಆಧಾರ ಕಾರ್ಡದಲ್ಲಿ ಕೊಪ್ಪಳ ವಿಳಾಸವಿದೆ. ಹುಬ್ಬಳ್ಳಿಯಲ್ಲಿ ವಾಸವಿದ್ದ ಬಗ್ಗೆ ದಾಖಲೆ ಹಾಜರಪಡಿಸಿದ್ದೇನೆ. ನಾನು ಹುಬ್ಬಳ್ಳಿಯಲ್ಲಿ ವಾಸ ಮಾಡುವುದಿಲ್ಲ ಅಂದರೆ ಸರಿಯಲ್ಲ. ನಾನು ಕೊಪ್ಪಳ ಖಾಯಂ ನಿವಾಸಿ ಅಲ್ಲ ಅಂದರೆ ಸರಿಯಲ್ಲ. ಈ ದಿನ ನ್ಯಾಯಾಲಯಕ್ಕೆ ಮಾವನ ಜೊತೆಗೆ ವಾಹನದಲ್ಲಿ ಬಂದಿದ್ದೇನೆ. ನನಗೆ ನಡೆಯಲು ಬರುವುದಿಲ್ಲ. ನನಗೆ ಅಪಘಾತ ದಿಂದ ನೋವು ಇದೆ, ನಡೆಯಲು ಬರುವುದಿಲ್ಲ, ಆದಾಯ ಕುಂಠಿತವಾಗಿದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**MVC 60-25** **PW : 1**

ನನ್ನ ವಯಸ್ಸು 32 ಗಿಂತ ಹೆಚ್ಚಾಗಿದೆ ಅಂದರೆ ಸರಿಯಲ್ಲ. ಅಂಗನ್ಯೂನ್ಯತೆ ಆಗಿದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅನಾವಶ್ಯಕವಾಗಿ ಬಸ್ ನ್ನು ಪಕ್ಷಗಾರರನ್ನಾಗಿ ಮಾಡಿದ್ದೇವೆ ಅಂದರೆ ಸರಿಯಲ್ಲ. ಲಾರಿ ವಿಮೆ ಕಂಪನಿ ಮಾತ್ರ ಪರಿಹಾರ ಕೊಡಲು ಬಾಧ್ಯಸ್ಥರು ಅಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ S N P, ವಕೀಲರಿಂದಃ**

ನನ್ನ ತವರು ಮನೆ ಕೊಪ್ಪಳ, ಗಂಡನ ಮನೆ ಹುಬ್ಬಳ್ಳಿ. ನಾನು ಆ ದಿನ ಮಂಗಳೂರಿನಿಂದ ಕೊಪ್ಪಳಕ್ಕೆ ಹೊರಟಿದ್ದೆನು. ಘಟನಾ ಕಾಲಕ್ಕೆ ಕೆ ಎಸ್ ಆರ್ ಟಿ ಸಿ ಬಸ್ ದಲ್ಲಿದ್ದೆನು. ಅಪಘಾತ ವು ಯಲ್ಲಾಪೂರ ದೋಣಿ ಕ್ರಾಸದಲ್ಲಿ ಆಗಿದೆ. ನಾನು ಇದ್ದ ಬಸ್ ಅತಿವೇಗದಲ್ಲಿ ಬರುತ್ತಿತ್ತು ಅಂದರೆ, ನಾನು ಮಲಗಿಕೊಂಡಿದ್ದರಿಂದ ಗೊತ್ತಿಲ್ಲ. ಲಾರಿ ಇಂಡಿಕೇಟರ ಲೈಟ ಹಾಕಿ ನಿಂತುಕೊಂಡಿತ್ತು ಅಂದರೆ ಗೊತ್ತಿಲ್ಲ. ಲಾರಿ ಇಂಡಿಕೇಟರ ಲೈಟ ಹಾಕಿ ನಿಂತುಕೊಂಡಿದ್ದರೂ ಸಹ ನಮ್ಮ ಬಸ್ ಅತಿ ವೇಗವಾಗಿ ಬಂದು ಡಿಕ್ಕಿಪಡಿಸಿತು ಅಂದರೆ ಗೊತ್ತಿಲ್ಲ. ಲಾರಿ ಚಾಲಕನಿಗೆ ಡಿ ಎಲ್ ಹಾಗೂ ಎಲ್ಲಾ ದಾಖಲೆಗಳಿದ್ದು 3 ನೇ ಎದುರುದಾರನ ಕಂಪನಿಯಲ್ಲಿ ವಿಮೆ ಮಾಡಿಸಿದ್ದರಿಂದ ಲಾರಿ ಮಾಲಿಕ ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.